ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) -ಇಲ್ಲ-

ಇ) ಉದ್ಭವಿಸುವುದಿಲ್ಲ.

ಈ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಕಟೀಲು ಬೈಪಾಸುರಸ್ತೆ

265 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕಟೀಲು ದೇವಸ್ಥಾನದ ವಶಾರದಲ್ಲಿ ಜನ ಸಂದಣಿಯಿಂದ ರಾಜ್ಯ ಹೆದ್ದಾರಿಯಲ್ಲಿ ವಾಹನಸಂಚಾರಕ್ಕೆ ತೊಂದರೆಯಾಗುವುದರಿಂದ ಬೈಪಾಸು ರಸ್ತೆಯ ನಿರ್ಮಾಣ ಮಾಡಲಾಗುವುದೆಂದು ವಿಧಾನಸಭೆಯಲ್ಲಿ ಇತ್ತ ಭರವಸೆಯಂತೆ ಸರ್ಕಾರವು ಏನು ಕ್ರಮ ಕೈಗೊಂಡಿದೆ.*

ಆ) *ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?*

ಇ) *ವಿಮಾನ ನಿಲ್ದಾಣಕ್ಕೆ ಹೋಗುವ ಜನರಿಗೆ ತೊಂದರೆಯಾಗದಂತೆ ಈ ರಸ್ತೆಯ ನಿರ್ಮಾಣವನ್ನು ಯಾವಾಗ ಪ್ರಾರಂಭ ಮಾಡಲಾಗುವುದು.*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಭೂಸ್ವಾಧೀನದ ವಿಷಯವನ್ನು ಒಳಗೊಂಡಿದ್ದರಿಂದ ಈ ಕಾಮಗಾರಿಯನ್ನು 1992-93ನೇ ಸಾಲಿನ ಆಯವ್ಯಯದ ಪಟ್ಟಿಯಲ್ಲಿ ಸೇರಿಸಲಾಗಿಲ್ಲ.

ಆ) ಒಟ್ಟು 13.00 ಲಕ್ಷ ರೂ. ಅಂದಾಜಾಗುತ್ತದೆ.

ಇ) ಭೂಸ್ವಾಧೀನವಾದ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.

ಚಿತಾಪುರ ಬಳಿ ರೈಲ್ವೆ ಹಳಿ ಮೇಲೆ ಸೇತುವೆ ನಿರ್ಮಾಣ.

863-ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಹಾಗೂ ಚಿತ್ತಾಪೂರ ಕ್ಷೇತ್ರದ ಸುಮಾರು 25-30 ಗ್ರಾಮಗಳಿಗೆ ಸಂಪರ್ಕವಿರುವ ರಸ್ತೆಗೆ ಚಿತ್ತಾಪೂರಿನ ಸಮೀಪ ರೈಲ್ವೆ ಹಳಿ ಮೇಲೆ ಸೇತುವೆ ಇಲ್ಲದೆ ಬಸ್ಸ್‌ಗಳು ಹಾಗೂ ವಾಹನಗಳ ಪ್ರಯಾಣ ಕಷ್ಟಕರವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಈ ಮೇಲಿನ ಸೇತುವೆಗಾಗಿ ಅಡಿಗಲ್ಲು ಸಮಾರಂಭವನ್ನು ಮಾಡಿದ್ದು ನಿಜವೇ?*

ಇ) *ಹಾಗಿದ್ದಲ್ಲಿ ಅಡಿಗಲ್ಲು ಸಮಾರಂಭ ಮಾಡಿರುವ ಸ್ಥಳ ಯಾವ ಸರ್ವೆ ನಂಬರಿನಲ್ಲಿ ಇದೆ. ಈ ಕೆಲಸ ಮಂಜೂರಾಗಿದ್ದರೂ ಕೆಲಸ ಪ್ರಾರಂಭವಾಗಿಲ್ಲದಿರುವುದಕ್ಕೆ ಕಾರಣಗಳೇನು?*

ಈ) *ಈಗಾಲಾದರೂ ಕೆಲಸ ಪ್ರಾರಂಭ ಮಾಡಿ ಆ ಭಾಗದ ಜನರ ಹಾಗೂ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?*

ಶ್ರೀ ಕೆ. ಜೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಗಮನಕ್ಕೆ ಬಂದಿರುತ್ತದೆ.

ಆ) ನಿಜ.

ಇ) ಚಿತ್ತಾಪುರದ ಚಿತ್ತಾಪುರ (ಪಿ) 129ನೇ ಸರ್ವೆ ನಂಬರಿನಲ್ಲಿ ಅಡಿಗಲ್ಲೂ ಮಾಡಲಾಯಿತು. ರೈಲ್ವೆ ಮೇಲು ಸೇತುವೆಯನ್ನು ರೈಲ್ವೆ ಇಲಾಖೆಯವರೇ ಮಾಡಬೇಕಿದ್ದು, ಇದಕ್ಕಾಗಿ ಅವರಿಗೆ 18.62 ಲಕ್ಷ ರೂ.ಗಳ ಠೇವಣಿಯನ್ನು ಸಹ ಮಾಡಲಾಗಿದೆ. ಪೂರ್ವಭಾವಿ ಪರಿಶೀಲನೆ ನಡೆದಿದ್ದು ರೈಲ್ವೆ ಇಲಾಖೆಯವರು ನಕ್ಷೆಗಳನ್ನು ಅಂತಿಮಗೊಳಿಸಬೇಕಾಗಿದೆ.

ಈ) ಶೀಘ್ರ ಕೆಲಸ ಪ್ರಾರಂಭಿಸಲು ರೈಲ್ವೆ ಇಲಾಖೆಯವರಿಗೆ ಒತ್ತಾಯಿಸಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4-ನ್ನು ಅಗಲಗೊಳಿಸುವುದು.

943 - ಶ್ರೀ ಎಸ್.ಷಫಿ ಅಹ್ಮದ್ (ತುಮಕೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-4ನ್ನು ನಾಲ್ಕುಪಥ ರಸ್ತೆಯನ್ನಾಗಿ ಅಗಲ ಗೊಳಿಸುವ ಕಾರ್ಯಕ್ರಮ ಯಾವ ಹಂತದಲ್ಲಿದೆ?

ಆ) ನೆಲಮಂಗಲದಿಂದ ತುಮಕೂರ್‌ವರೆಗಿನ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು?

ಶ್ರೀ ಕೆ.ಜೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಭಾರತ ಸರ್ಕಾರದ ಭೂಸಾರಿಗೆ ಮಂತ್ರಾಲಯದ ಪರಿಶೀಲನೆಯಲ್ಲಿದೆ.

ಆ) ರಾಷ್ಟ್ರೀಯ ಹೆದ್ದಾರಿ ನಂ. 4ರಲ್ಲಿ ನೆಲಮಂಗಲದಿಂದ ತುಮಕೂರುವರೆಗಿನ 45 ಕಿ.ಮೀ.ಗಳು ಉದ್ದದ ದ್ವಿಪಥ ರಸ್ತೆಯನ್ನು ನಾಲ್ಕು ಪಥ ರಸ್ತೆಯನ್ನಾಗಿ ಪರಿವರ್ತಿಸುವ ಮತ್ತು ಬಲಪಡಿಸುವ ಕೆಲಸದ ಸರ್ವೆ ಮತ್ತು ಇನ್ವೆಸ್ಟಿಗೇಷನ್ ಕಾರ್ಯ ಮುಗಿದಿದ್ದು, ಸದರಿ ಕೆಲಸವನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಸಹಾಯ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಕೇಂದ್ರ ಸರ್ಕಾರದವರು ಶಿಫಾರಸ್ಸು ಮಾಡಿರುತ್ತಾರೆ. ಈ ಯೋಜನೆಯು ಬ್ಯಾಂಕಿನ ಪರಿಶೀಲನೆಯಲ್ಲಿದೆ. ಒಪ್ಪಿಗೆ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಪರಿಷತ್ತುಗಳಿಂದ ರಸ್ತೆ ಡಾಂಬರೀಕರಣಕ್ಕೆ ಪಡೆಯಲಾದ ಹಣ.

338 - ಶ್ರೀ ಎಸ್.ಶಫಿ ಅಹಮದ್ (ತುಮಕೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತುಗಳಿಂದ ಪಡೆಯಲಾದ ರಸ್ತೆಗಳನ್ನು ಡಾಂಬರೀಕರಣ ಮಾಡುವ ಸಲುವಾಗಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನೀಡಲಾದ ಅನುದಾನ ಎಷ್ಟು? ಹಾಗೂ ಈ ಕೆಲಸಗಳು ಯಾವಾಗ ಪ್ರಾರಂಭವಾಗುತ್ತವೆ?

ಶ್ರೀ ಕೆ.ಜೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಅನುದಾನವನ್ನು ಇನ್ನೂ ಬಿಡುಗಡೆ ಮಾಡಿರುವುದಿಲ್ಲ. 1993 - 94ನೇ ಸಾಲಿನಿಂದ ಅಭಿವೃದ್ಧಿ ಕಾಮಗಾರಿಗಳನ್ನು ಹಂತಹಂತವಾಗಿ ತೆಗೆದುಕೊಳ್ಳುವ ಪ್ರಸ್ತಾಪವಿದೆ.